**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1867/2022**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಶ್ರೀಮತಿ ರಶ್ಮಿ

ಗಂಡನ ಹೆಸರು : ಜೂಜೆ ಪಿಂಟೋ

ವಯಸ್ಸು : 44 ವರ್ಷ

ಉದ್ಯೋಗ : ಸಹಶಿಕ್ಷಕಿ , ಸ.ಕಿ. ಪ್ರಾಥಮಿಕ ಶಾಲೆ, ಕಸಲಗದ್ದೆ, ಭಟ್ಕಳ

ವಾಸ್ತವ್ಯ : ಕುಮಟಾ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 12/08/2024**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಕಳೆದ 11 ವರ್ಷಗಳಿಂದ ಸಹಶಿಕ್ಷಕಿಯಾಗಿ ಸ.ಕಿ. ಪ್ರಾಥಮಿಕ ಶಾಲೆ, ಕಸಲಗದ್ದೆ, ಭಟ್ಕಳದಲ್ಲಿ ಕಾರ್ಯನಿರ್ಹಿಸುತಿದ್ದೇನೆ.

2. ದಿಃ 05.12.2021 ರಂದು ರವಿವಾರ ನಮ್ಮ ಶಾಲೆಯ ಕಂಪೌಂಡಿನಲ್ಲಿರುವ 8 –10 ಮರಗಳನ್ನು ಕಡಿದು ಹಾಕಿದ್ದರು. ದಿಃ 06.12.2024 ರಂದು ಸೋಮವಾರ ಬೆಳಿಗ್ಗೆ ನಾವು ಹೋಗಿ ನೋಡಿದಾಗ ಸದರಿ ಮರಗಳನ್ನು ಕಡಿದು ಎಲೆಗಳನ್ನು ಹಾಕಿ ಮುಚ್ಚಿಟ್ಟಿದುದು ಕಂಡುಬಂದಿರುತ್ತದೆ. ನಂತರ ನಾನು ಚಾಸಾ–4 ರವರು ಕೂಡಿ ಎಸ್ ಡಿ ಎಮ್ ಸದಸ್ಯರಿಗೆ ಈ ವಿಷಯವನ್ನು ಹೇಳಿ ನಂತರ ಚಾಸಾ–8 ರವರಿಗೆ ಸದರಿ ವಿಷಯದ ಕುರಿತು ಅರ್ಜಿ ಬರೆದಿರುತ್ತೇವೆ. ನಂತರ ದಿಃ 08.12.2021 ರಂದು ಮದ್ಯಾಹ್ಣ ನಾವು ನಮ್ಮ ಶಾಲೆಯ ನಮ್ಮ ನಮ್ಮ ತರಗತಿಯಲ್ಲಿ ಪಾಠ ಮಾಡುತ್ತಿರುವಾಗ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ನಮ್ಮ ಮೇಲೆ ದೂರು ನೀಡುತ್ತೀರಾ ನಿಮ್ಮನ್ನು ಇಲ್ಲಿಂದ ವರ್ಗಾವಣೆ ಮಾಡುವುದಾಗಿ ಧಮ್ಕಿ ಹಾಕಿ ಹೆದರಿಸಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ 1 ನೇ ಆರೋಪಿ ನನ್ನ ಎಡಗೈ ಹಿಡಿದು ದೂಡಿ ಹಾಕಿರುತ್ತಾರೆ. ನಂತರ ಚಾಸಾ – 4 ರವರು ನನ್ನನ್ನು ಅವರಿಂದ ತಪ್ಪಿಸಿ ಒಳಗೆ ಕರೆದುಕೊಂಡು ಹೋಗುವಾಗ ನಾನು ತಲೆ ತಿರುಗಿ ಬಿದ್ದಿರುತ್ತೇನೆ. ಆಗ ಚಾಸಾ –4 ಮತ್ತು 5 ರವರು ನನ್ನನ್ನು ಭಟ್ಕಳ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು

ಹೋಗಿ ಚಿಕಿತ್ಸೆ ನೀಡಿರುತ್ತಾರೆ. 3 ನೇ ಆರೋಪಿತರು ನಮ್ಮ ಶಾಲೆಯ ಪಂಪಸೆಟ್ಟನ್ನು ನಮ್ಮ ಅನುಮತಿ ಇಲ್ಲದೇ ತೆಗೆದುಕೊಂಡು ಹೋಗಿರುತ್ತಾರೆ ಹಾಗೂ ಪದೇ ಪದೇ ಬಂದು ಪಂಪಸೆಟ್ಟು ರಿಪೇರಿ



ಆಗುವುದಿಲ್ಲ ನೀವು 15 ಮಕ್ಕಳಿಂದ ತಲಾ ಒಂದೊಂದು ಸಾವಿರ ಪಡೆದು ಹೊಸ ಪಂಪಸೆಟ್ಟು ಪಡೆಯಬೇಕು ಮಕ್ಕಳಿಂದ ಹಣವನ್ನು ಒಟ್ಟು ಮಾಡಿ ಕೊಡಿ ಎಂದು ಪೀಡಿಸುತ್ತಿದ್ದರು. 2 ನೇ ಆರೋಪಿಯು ನನಗೆ ನಿಮ್ಮ ಬಗ್ಗೆ ನಿಮ್ಮ ಶಾಲೆಯ ಬಗ್ಗೆ ಸಾಮಾಜಿಕ ಜಾಲ ತಾಣದಲ್ಲಿ ಬರೆದು ನಿಮ್ಮ ಮರ್ಯಾದೆ ತೆಗೆಯುತ್ತೇವೆಂದು ಹೆದರಿಸುತ್ತಿದ್ದರು. 4 ನೇ ಆರೋಪಿತರು ಜೀವದ ಬೆದರಿಕೆ ಹಾಕಿರುತ್ತಾರೆ. ಈ ಬಗ್ಗೆ ನಾವು ನಮ್ಮ ಮೇಲಾಧಿಕಾರಿಗಳ ಜೊತೆಗೆ ಚರ್ಚಿಸಿರುತ್ತೇವೆ. ದಿಃ 04.01.2022 ರಂದು ಸಂಜೆ 4.45 ಗಂಟೆ ಸಮಯಕ್ಕೆ 1 ನೇ ಆರೋಪಿಯು ನನಗೆ ರಸ್ತೆಯ ಮಧ್ಯದಲ್ಲಿ ನಿಮ್ಮ ಬಗ್ಗೆ ಬಿ ಇ ಒ ರವರಿಗೆ ಹೇಳಿ ವರ್ಗಾವಣೆ ಮಾಡಿಸುವುದಾಗಿ ಬೆದರಿಕೆ ಹಾಕಿರುತ್ತಾರೆ. ನಂತರ ನಮ್ಮ ಶಿಕ್ಷಕರ ಸಂಘದ ಅಧ್ಯಕ್ಷರ ಜೊತೆ ಚರ್ಚಿಸಿ ದಿಃ 05.01.2022 ರಂದು ಪೊಲೀಸ ಠಾಣೆಗೆ ಹೋಗಿ ದೂರು ನೋಡಿರುತ್ತೇವೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಮೇಲಾಧಿಕಾರಿಗಳ ಜೊತೆ ಚರ್ಚೆ ಮಾಡಬೇಕಾಗಿರುವುದರಿಂದ ದೂರು ನೀಡಲು ವಿಳಂಭವಾಗಿರುತ್ತದೆ. ದೂರು ನೀಡಿದ ಮಾರನೇ ದಿನ ದಿಃ 07.01.2022 ರಂದು ಪೊಲೀಸರು ಮತ್ತು ಪಂಚರಾದ ಚಾಸಾ – 2 ಮತ್ತು 3 ರವರು ಶಾಲೆಗೆ ಪಂಚನಾಮೆಗೆ ಬಂದಿದ್ದರು. ನಾನು ಪೊಲೀಸರಿಗೆ ಗುನ್ಹಾ ಸ್ಥಳವನ್ನು ತೋರಿಸಿರುತ್ತೇನೆ. ನಂತರ ಪೋಟೋ ತೆಗೆದಿರುತ್ತಾರೆ ಮತ್ತು ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆಯನ್ನು ಮದ್ಯಾಹ್ನ 2.00 - 3.00 ಗಂಟೆಯವರೆಗೆ ಮಾಡಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 3 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಒಟ್ಟಾಗಿ ನಿಪಿ-3 ರಿಂದ 5 ಎಂದು ಗುರುತಿಸಲಾಯಿತು. ದಿಃ 16.04.2022 ರಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 6 ಎಂದು , ಸಾಕ್ಷಿಯ ಸಹಿಯನ್ನು ನಿಪಿ-6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ಚಾಸಾ –8 ರವರನ್ನು ಕೇಳಿಕೊಂಡು ದೂರು ದಾಖಲಿಸಿರುತ್ತೇನೆ. ನಮ್ಮ ಶಾಲೆ ಭಟ್ಕಳ ನಗರದಿಂದ ನಾಲ್ಕುವರೆ ಕಿಮೀ ದೂರದಲ್ಲಿದೆ. ದೂರನ್ನು ನಮ್ಮ ಮನೆಯ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿ ಕುಮಟಾದಲ್ಲಿ ಪ್ರಿಂಟ್ ತೆಗೆದಿರುತ್ತೇನೆ. ಮರ ಕಟಾವಣೆ ಮಾಡಿದ ಬಗ್ಗೆ ಚಾಸಾ –8 ರವರಿಗೆ



ಲಿಖಿತವಾಗಿ ನಾನು ಬರೆದುಕೊಟ್ಟಿರುತ್ತೇನೆ. ಚಾಸಾ –8 ರವರಿಗೆ ಲಿಖಲಿತವಾಗಿ ಬರೆದುಕೊಟ್ಟಿರುವ ಬಗ್ಗೆ ಪೊಲೀಸರಿಗೆ ದೂರು ನೀಡುವಾಗ ಹೇಳಿಲ್ಲ. ಪೊಲೀಸರು ನಾನು ಚಾಸಾ –8 ರವರಿಗೆ ಲಿಖಿತವಾಗಿ ದಿಃ 05.12.2021 ರಂದು ಮರಕಟಾವಣೆ ಬಗ್ಗೆ ಬರೆದಿರುವ ಕುರಿತು ನನಗೆ ಕೇಳಿರುತ್ತಾರೆ. ನಮ್ಮ ಶಾಲೆಯ ಕಚೇರಿಯ ಕಡತದಲ್ಲಿ ಚಾಸಾ –8 ರವರಿಗೆ ಬರೆದ ಪತ್ರವನ್ನು ಇಡಲಾಗಿದೆ. ಪೊಲೀಸರು ಪಂಚನಾಮೆಗೆ ಬಂದಾಗ ಸದರಿ ಪತ್ರವನ್ನು ಪಡೆದಿರುವುದಿಲ್ಲ ಮತ್ತು ಕೇಳಿರುವುದಿಲ್ಲ. ನಮ್ಮ ಶಾಲೆಯಲ್ಲಿ ಸದರಿ ಘಟನೆಯಾದಾಗ 15 ಮಕ್ಕಳು ಇದ್ದರು. ನಮ್ಮ ಶಾಲೆಯು ಬೆಳಿಗ್ಗೆ 9.30 ರಿಂದ 12.30 ಹಾಗೂ ಮದ್ಯಾಹ್ನ 1.40 ರಿಂದ 4.30 ಗಂಟೆಯವರೆಗೆ ನಡೆಯುತ್ತದೆ. 1 ನೇ ಆರೋಪಿಯು ದಿಃ 08.12.2021 ರಂದು ನನ್ನ ಮೇಲೆ ಹಲ್ಲೆ ಮಾಡಿದಾಗ ಶಾಲೆಯ ಮಕ್ಕಳು ನೋಡಿರುತ್ತಾರೆ ಮತ್ತು ತರಗತಿಯಲ್ಲಿಯೇ ಹಲ್ಲೆ ಮಾಡಿರುತ್ತಾರೆ. ಶಾಲೆಯ ಮಕ್ಕಳು ಹಲ್ಲೆ ಮಾಡಿದ್ದನ್ನು ನೋಡಿರುವ ಕುರಿತು ಪೊಲೀಸರಿಗೆ ನಾನು ಹೇಳಿಕೆ ನೀಡಿರುವ ಬಗ್ಗೆ ಈಗ ನನಗೆ ನೆನಪಿಲ್ಲ. ಶಾಲೆಯ ಮರಗಳನ್ನು ಕಡಿದ ಬಗ್ಗೆ ಮಕ್ಕಳಿಗೆ ಮಾಹಿತಿ ಇದೆ. ದಿಃ 08.12.2021 ರಂದು ಹಲ್ಲೆಯಾದಾಗ ನನ್ನ ಎಡಗೈ ಉದಿಕೊಂಡಿತ್ತು. ನನ್ನ ಬಟ್ಟೆ ಕೊಳೆಯಾಗಿರುವುದಿಲ್ಲ ಮತ್ತು ಹರಿದಿರುವುದಿಲ್ಲ. ದಿಃ 08.12.2021 ರಂದು ವೈದ್ಯರ ಬಳಿ ಚಿಕಿತ್ಸೆಗಾಗಿ ಹೋದಾಗ ಎಡ ಕೈ ಉದಿರುವ ಬಗ್ಗೆ ತಿಳಿಸಿರುತ್ತೇನೆ. ಚಾಸಾ–4 ರವರಿಗೆ ಯಾವುದೇ ಗಾಯ ಆಗಿರುವುದಿಲ್ಲ. ದಿಃ 08.12.2021 ರಂದು ಚಾಸಾ –5 ರವರು ಇದ್ದರು. ದಿಃ 08.12.2021 ರಂದು ಸರಕಾರಿ ಆಸ್ಪತ್ರೆಗೆ ಹೋದಾಗ ಸದರಿ ಗಾಯ ಹಲ್ಲೆ ಮಾಡಿ ಆಗಿರುವ ಕುರಿತು ನಾನು ಡಾ. ಸವಿತಾ ಕಾಮತ್ ರವರಿಗೆ ಹೇಳಿರುತ್ತೇನೆ ಆಗ ಅವರು ಠಾಣೆಗೆ ಫೋನ್ ಕರೆ ಮಾಡಿ ತಿಳಿಸಿರುತ್ತಾರೆ. ಪೊಲೀಸರು ಆಸ್ಪತ್ರೆಗೆ ಬಂದಿರುತ್ತಾರೆ. ಪೊಲೀಸರು ದಿಃ 08.12.2021 ರಂದು ಮದ್ಯಾಹ್ನ 4.30 ರೊಳಗೆ ಆಸ್ಪತ್ರೆಗೆ ಬಂದಿದ್ದರು. ದಿಃ 04.01.2022 ರಂದು ನಡೆದ ಘಟನೆಯು ನಮ್ಮ ಶಾಲೆಯಿಂದ ಅಂದಾಜು ಅರ್ದ ಕಿಮಿ ದೂರ ಇರುತ್ತದೆ. ಘಟನೆಯು ನಮ್ಮ ಶಾಲೆಯಿಂದ ಅಂದಾಜು ಅರ್ದ ಕಿಮಿ ದೂರ ದಲ್ಲಿ ಆಗಿರುತ್ತದೆ ಎಂಬ ವಿಷಯವನ್ನು ಪೊಲೀಸರಿಗೆ ತನಿಖೆ ಕಾಲದಲ್ಲಿ ನಾನು ಹೇಳಿಲ್ಲ ಮತ್ತು ಅವರು ನನಗೆ ಕೇಳಿಲ್ಲ. ದಿಃ 04.01.2022 ರ ಗುನ್ನಾ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿಲ್ಲ ಮತ್ತು ಅಲ್ಲಿ

ಪಂಚನಾಮೆ ಮಾಡಿಲ್ಲ. 1 ಮತ್ತು 2 ನೇ ಆರೋಪಿತರು ನಮ್ಮ ಶಾಲೆ ಇರುವ ಕಸಲಗದ್ದೆ ಊರಿನ ಗೃಹಸ್ಥರು ಆಗಿದ್ದಾರೆ ಎಂದರೆ ಸರಿ. 3 ನೇ ಆರೋಪಿಯು ಕಸಲಗದ್ದೆ ಗ್ರಾಮ ಪಂಚನಾಯತಿಯ ಸದಸ್ಯರು ಆಗಿದ್ದಾರೆ ಎಂದರೆ ಸರಿ. 4 ಮತ್ತು 5 ನೇ ಆರೋಪಿತರು ನಮ್ಮ ಶಾಲಾಭಿವೃದ್ದಿ ಸಮೀತಿಯ ಸದಸ್ಯರು ಆಗಿರುತ್ತಾರೆ. ನಾನು ಶಾಲೆಯ ಸಮಯಕ್ಕೆ ಸರಿಯಾಗಿ ಹೋಗಲು ನಿರ್ಲಕ್ಷತನ



ತೋರಿಸುತ್ತಿದ್ದು ಈ ಬಗ್ಗೆ ಆರೋಪಿತರು ಸಾರ್ವಜನಿಕರಿಗೆ ದೂರಿದ್ದರು ಆಗ ನನಗೆ ಚಾಸಾ -8 ರವರು ಸೂಚನೆ ನೀಡಿದ್ದರು ಎಂದರೆ ಸರಿಯಲ್ಲ. ನನ್ನ ವಿರುದ್ದ ಚಾಸಾ -8 ರವರಿಗೆ ಆರೋಪಿತರು ದೂರು ನೀಡಿರುವ ಬಗ್ಗೆ ಅವರೇ ನನಗೆ ಹೇಳಿದ್ದರು. ಆ ಕಾರಣಕ್ಕಾಗಿ ಅರೋಪಿತರ ಮೇಲಿನ ಸಿಟ್ಟಿನಿಂದ ನಡೆಯದ ಘಟನೆಯನ್ನು ಸೃಷ್ಟಿಸಿ ಸುಳ್ಳು ಪಿರ್ಯಾದಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಘಟನೆಯಿಂದ ಯಾವುದೇ ಗಾಯವಾಗಿದ್ದು ಇಲ್ಲ ಎಂದರೆ ಸರಿಯಲ್ಲ. ನಮ್ಮ ಶಾಲೆಯ ಸುತ್ತ ಮುತ್ತಲೂ 15 -20 ಮನೆಗಳು ಇವೆ. ದಿ:08.12.2021 ರಂದು ನಡೆದ ಘಟನೆಯಲ್ಲಿ ನಾನು ಕೂಗಿಕೊಂಡಿರುವುದಿಲ್ಲ. ನನ್ನ ಸಮಕ್ಷಮ ಘಟನೆಗೆ ಸಂಬಂಧಿಸಿ ಪೊಲೀಸರ ಅಕ್ಕಪಕ್ಕದವರನ್ನು ವಿಚಾರಣೆ ಮಾಡಿರುವುದಿಲ್ಲ. ದೂರಿನಲ್ಲಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಪಂಚನಾಮೆ ಗ್ರಾಮೀಣ ಠಾಣೆಯಲ್ಲಿ ಸೃಷ್ಟಿಮಾಡಿದ್ದು ಎಂದರೆ ಸರಿಯಲ್ಲ. ಪೊಟೋಗಳಲ್ಲಿ ಯಾವುದೇ ಮರ ಕಡಿದು ಕುರುಹುಗಳು ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**